ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

**ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ಕೆನರಾ ವೃತ್ತ, ಶಿರಸಿ-581 402**

**ಅಧಿಸೂಚನೆ ಸಂಖ್ಯೆ: ಎ1/ಸಿಬ್ಬಂದಿ/ಅ ವೀ/ ನೇರ ನೇಮಕಾತಿ/ಸಿಆರ್-11/2023-24**
**ದಿನಾಂಕ: 15/09/2023.**

**2023-24ನೇ ಸಾಲಿನಲ್ಲಿ 32 ಅರಣ್ಯ ವೀಕ್ಷಕ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನೇರ ನೇಮಕಾತಿ.**

# ಪ್ರಕಟಣೆ

ಈ ಕಚೇರಿಯ ಅಧಿಸೂಚನೆ ದಿನಾಂಕ: 15/09/2023 ರಲ್ಲಿ 32 ಅರಣ್ಯ ವೀಕ್ಷಕ ಹುದ್ದೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಯಲ್ಲಿನ ಷರತ್ತುಗಳಂತೆ ದಿನಾಂಕ: 14/02/2024 ರಂದು ಪ್ರಕಟಿಸಿದ ಪ್ರಕಟಣೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳ 1:20 (ಹುದ್ದೆ:ಅಭ್ಯರ್ಥಿ)ಗಳ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಈ ಸಂಬಂಧ ದಿನಾಂಕ: 15/02/2024 ರಿಂದ 20/02/2024 ರೊಳಗೆ ಈ ಕಚೇರಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ವಿಲೇ ಮಾಡಿ ಹಾಗೂ ಅಭ್ಯರ್ಥಿಗಳಿಗೆ ಮಾಹಿತಿಯನ್ನು ನೀಡಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ: 22/02/2024 ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ: 22/02/2024 ರಂದು ಪ್ರಕಟಿಸಿದ ಪ್ರಕಟಣೆಯ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಅಧಿಸೂಚನೆಯಲ್ಲಿರುವ ಷರತ್ತುಗಳಂತೆ ದೈಹಿಕ ತಾಳ್ವಿಕೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ [Physical Efficiency Test] ಹಾಗೂ ದೇಹ ದಾರ್ಡ್ಯತೆ [Physical Standard Test] ಹಾಗೂ ಪ್ರಾಥಮಿಕ ಹಂತದ ಮೂಲ ದಾಖಲೆಗಳ ಪರಿಶೀಲನೆಗಳನ್ನು ದಿನಾಂಕ: 29/02/2024 ರಿಂದ 04/03/2024 ರವರೆಗೆ ನಡೆಸಬೇಕಾಗಿರುತ್ತದೆ.

ಅದರಂತೆ, ಅರ್ಹ ಅಭ್ಯರ್ಥಿಗಳಿಗೆ ಈ ಕೆಳಕಂಡ ದಿನಾಂಕ, ಸಮಯ ಹಾಗೂ ಸ್ಥಳವನ್ನು ನಿಗದಿಪಡಿಸಲಾಗಿದ್ದು, ಮೂಲ ದಾಖಲೆಗಳ ಪರಿಶೀಲನೆ ಸಂದರ್ಭದಲ್ಲಿ (I). ಇತ್ತೀಚಿನ ನಾಲ್ಕು ಭಾವಚಿತ್ರ, (Passport Size), (II). ಆನ್-ಲೈನ್ ಮುಖಾಂತರ ಅರ್ಜಿ ಸಲ್ಲಿಸುವಾಗ Upload ಮಾಡಿರುವಂತಹ ಎಲ್ಲಾ ಮೂಲ ದಾಖಲೆ / ಪ್ರಮಾಣ ಪತ್ರಗಳು (III). ಮೂಲ ದಾಖಲೆಗಳ ಒಂದು ಜೇರಾಕ್ಸ್ (Gazetted ಅಧಿಕಾರಿಯಿಂದ ದೃಢೀಕರಿಸಿದ) ಪ್ರತಿ, (IV). ಯಾವುದಾದರು ಒಂದು ಗುರುತಿನ ಚೀಟಿಯೊಂದಿಗೆ **ದಿನಾಂಕ: 29/02/2024 ಬೆಳಿಗ್ಗೆ 07.00 ಘಂಟೆಗೆ** ಸರಿಯಾಗಿ ಹಾಜರಾಗುವುದು.

| ಕ್ರ.ಸಂ. | ನೇರ ನೇಮಕಾತಿಯ ಹುದ್ದೆ | ದಿನಾಂಕ | ಪರೀಕ್ಷೆಯ ವಿವರ ಮತ್ತು ಸಮಯ | ಅಭ್ಯರ್ಥಿಗಳಿಗೆ ಪರೀಕ್ಷಾ ಪ್ರಕ್ರಿಯೆಗಳು ನಡೆಯುವ ಸ್ಥಳ | ಷರಾ |
|---|---|---|---|---|---|
| 01 | ಅರಣ್ಯ ವೀಕ್ಷಕ | 29/02/2024 & 04/03/2024 | ದೈಹಿಕ ತಾಳ್ವಿಕೆ [Physical Endurance Test] ಬೆಳಿಗ್ಗೆ-07 ಗಂಟೆ ಹಾಗೂ ದೈಹಿಕ ಕಾರ್ಯ ಸಮರ್ಥತೆ [Physical Efficiency Test] ಹಾಗೂ ಮೂಲ ದಾಖಲಾತಿಗಳ ಪರಿಶೀಲನೆ | ಶ್ರೀ ಮಾರಿಕಾಂಬಾ ಜಿಲ್ಲಾ ಕ್ರೀಡಾಂಗಣ, ಎಂ.ಇ.ಎಸ್, ಕಲಾ ಮತ್ತು ವಿಜ್ಞಾನ ಕಾಲೇಜು ಹತ್ತಿರ **ಶಿರಸಿ-581 402** ಉತ್ತರ ಕನ್ನಡ ಜಿಲ್ಲೆ | |
| | | | ದೇಹ ದಾರ್ಡ್ಯತೆ ಪರೀಕ್ಷೆ [Physical Standard Test] | ಸಾರ್ವಜನಿಕ ಪಂಡಿತ ತಾಲೂಕಾ ಆಸ್ಪತ್ರೆ **ಶಿರಸಿ-581 402** ಉತ್ತರ ಕನ್ನಡ ಜಿಲ್ಲೆ | |

ದಿನಾಂಕ: 23/02/2024.

(ಕೆ.ವಿ ವಸಂತ ರೆಡ್ಡಿ ಭಾ.ಅ.ಸೇ) 23-02-2024
ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಆಯ್ಕೆ ಪ್ರಾಧಿಕಾರ
ಕೆನರಾ ವೃತ್ತ, ಶಿರಸಿ.